**ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ ಹಾಗೂ**
ಪದನಿಮಿತ್ತ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿ.ಆಸು.ಇ. (ಚುನಾವಣೆಗಳು)
ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560001.

ಸಂಖ್ಯೆ: ಸಿಆಸುಇ 06 ಮಾಸ/ಪ.ಗೋ/ 2018 ದಿನಾಂಕ: 26-04-2018

**ಪತ್ರಿಕಾ ಟಿಪ್ಪಣಿ**

# ‘ಸುವಿಧಾ’ ದಲ್ಲಿ 6329 ಮತ್ತು ಸಮಾಧಾನ್‌ದಲ್ಲಿ 1349 ಅರ್ಜಿಗಳು ವಿಲೇವಾರಿ

**ಬೆಂಗಳೂರು ಏಪ್ರಿಲ್ 26 :**

ಸುವಿಧಾ ಏಕ ಗವಾಕ್ಷಿ ವ್ಯವಸ್ಥೆಯಡಿಯಲ್ಲಿ ಈವರೆಗೆ 6754 ಅನುಮತಿ ಕೋರಿಕೆಯ ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ 6329 ನ್ನು ವಿಲೇವಾರಿ ಮಾಡಲಾಗಿದೆ. ಗರಿಷ್ಠ 478 ಅರ್ಜಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವೀಕೃತವಾಗಿದ್ದರೆ, ಗುಲ್ಬರ್ಗಾ ಜಿಲ್ಲೆಯಲ್ಲಿ 414 ಅರ್ಜಿಗಳು ಸ್ವೀಕೃತವಾಗಿವೆ.

ಚುನಾವಣೆಗೆ ಸಂಬಂಧಿಸಿದ ಅನುಮತಿ/ಪರವಾನಗಿಗಳನ್ನು 24 ಗಂಟೆಗೊಳಗೆ ನೀಡಲು ಸುವಿಧಾ ಎಂಬ ಏಕಗವಾಕ್ಷಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಚುನಾವಣಾ ಅಭ್ಯರ್ಥಿಗಳು ಮತ್ತು ರಾಜಕೀಯ ಪಕ್ಷಗಳು ಸಭೆ, ರ್ಯಾಲಿ, ವಾಹನ, ತಾತ್ಕಾಲಿಕ ಚುನಾವಣಾ ಕಚೇರಿ ಸ್ಥಾಪನೆ, ಧ್ವನಿವರ್ಧಕ, ಇತ್ಯಾದಿಗಳಿಗೆ ಅನುಮತಿಗಾಗಿ ‘ಸುವಿಧಾ’ ಬಳಸಬಹುದು. ಬ್ಯಾಕ್‌ಎಂಡ್‌ನಲ್ಲಿ ವಿವಿಧ ಪ್ರಾಧಿಕಾರ/ಇಲಾಖೆಗಳ ಸಮನ್ವಯವನ್ನು ಒಂದೇ ಗವಾಕ್ಷಿಯಲ್ಲಿ ಲಭ್ಯವಾಗುವಂತೆ ‘ಸುವಿಧಾ’ ದಲ್ಲಿ ವ್ಯವಸ್ಥೆ ಮಾಡಲಾಗಿದೆ.

‘ಸಮಾಧಾನ’ದಲ್ಲಿ ಇದುವರೆಗೆ 1394 ದೂರು ಮತ್ತು ಸಲಹೆಗಳನ್ನು ದಾಖಲಿಸಲಾಗಿದ್ದು, ಈ ಪೈಕಿ 1349 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಮಾದರಿ ನೀತಿ ಸಂಹಿತೆ(ಎಂಸಿಸಿ) ಉಲ್ಲಂಘನೆಗೆ ಸಂಬಂಧಿಸಿದಂತೆ ಛಾಯಾಚಿತ್ರ, ಮುದ್ರಿತ ಧ್ವನಿ, ವಿಡಿಯೋಗಳನ್ನು ದೂರಿನ ಜೊತೆ ಸಲ್ಲಿಸಬಹುದು ಹಾಗೂ ಆಡಿಯೋ, ವಿಡಿಯೋ, ಚಿತ್ರ ಹಾಗೂ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಸಹ ಅವಕಾಶವಿದೆ.

ಚುನಾವಣೆಗೆ ಸಂಬಂಧಿಸಿದ ಅನುಮತಿ, ಪರವಾನಗಿ ಹಾಗೂ ಸಾರ್ವಜನಿಕ ಕುಂದುಕೊರತೆಗಳ ನಿವಾರಣೆಗೆ ಭಾರತದ ಚುನಾವಣಾ ಆಯೋಗವು ಸುವಿಧಾ ಮತ್ತು ಸಮಾಧಾನ್ ಎಂಬ ಎರಡು ನಾಗರಿಕ ಸೇವಾ ಅಪ್ಲಿಕೇಷನ್‌ಗಳನ್ನು ಅಭಿವೃದ್ಧಿಪಡಿಸಿ ರಾಜ್ಯ ಮುಖ್ಯ ಚುನವಣಾಧಿಕಾರಿಗಳ ವೆಬ್‌ಸೈಟ್ ceokarnataka.kar.nic.in ನಲ್ಲಿ ಹೋಸ್ಟ್ ಮಾಡಲಾಗಿದೆ.

-ಸಹಿ-
(ಸಂಜೀವ್ ಕುಮಾರ್)
ಮುಖ್ಯ ಚುನಾವಣಾಧಿಕಾರಿಗಳು ಮತ್ತು
ಪದನಿಮಿತ್ತ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಸಿಆಸುಇ, (ಚುನಾವಣೆಗಳು)